ಮತ್ತೆ ಕಟ್ಟಿಗೆ ಒಡೆಯಲು ಶುರು ಮಾಡಿದ. ಕೈ ಥರಗುಟ್ಟಿದವು. ಕಾಲುಗಳು ಕಂಪಿಸತೊಡಗಿದವು. ಬಾಗಿದ ಸೊಂಟ ನೆಟ್ಟಗೆ ಮಾಡಲು ಶಕ್ತನಾಗಲಿಲ್ಲ. ಕಣ್ಣಿಗೆ ಕತ್ತಲು ಕವಿದಂತಾಗಿ ತಲೆಯೂ ಸುತ್ತತೊಡಗಿತು. ಆದರೂ ಹಿಡಿದ ಕೆಲಸ ಬಿಡಲಿಲ್ಲ ಅವನು. ಗಂಟಲು ಒಣಗಿದಂತೆ ಒಂದು ಗುಟುಕು ಚಿಲುಮೆ ತಂಬಾಕು ಸೇದಿದರೆ ಪುನಃ ಶಕ್ತಿ ಹೊಂದಿಸಬಹುದು ಎಂದು ಯೋಚಿಸಿದ. ಆದರೆ ಚಿಲುಮೆ ಮತ್ತು ತಂಬಾಕು ಎಲ್ಲಿ ಸಿಗಬೇಕು?... ಇದು ಬ್ರಾಹ್ಮಣರ ಕೇರಿ ಬೇರೆ!... ನಮ್ಮ ಕೀಳು ಜಾತಿಯವರಂತೆ ಇವರೆಲ್ಲಿ ತಂಬಾಕು ಸೇವಿಸುತ್ತಾರೆ?... ಎಂದು ದುಖಿ ಯೋಚಿಸಿದ. ಊರಲ್ಲಿ ಒಬ್ಬನೇ ಗೊಂಡ ಇದ್ದ!... ಅವನಲ್ಲಿ ಖಂಡಿತ ಚಿಲುಮೆ ಮತ್ತು ತಂಬಾಕು ಇದ್ದೇ ಇರುತ್ತದೆ ಎಂದು ನೆನಪಿಸಿಕೊಂಡ. ಕೂಡಲೇ ಅವನ ಮನೆಯೆಡೆಗೆ ಓಡಿದ. ಪ್ರಯತ್ನ ಫಲ ಕೊಟ್ಟಿತು. ಚಿಲುಮೆ ಮತ್ತು ತಂಬಾಕು ಸಿಕ್ಕಿತು. ಆದರೆ ಅವನಲ್ಲಿ ಬೆಂಕಿ ಇರಲಿಲ್ಲ.

"ಬೆಂಕಿ ಚಿಂತೆ ಬಿಡಣ್ಣ... ನಾನು ಪಂಡಿತರ ಮನೆಯಲ್ಲಿ ಕೇಳಿ ಪಡೆಯುತ್ತೇನೆ. ಈಗ ಹೇಗೂ ಅಡುಗೆ ಒಲೆ ಹೊತ್ತಿಸಿರುತ್ತಾರೆ..." ಎಂದು ದುಖಿ ಎರಡೂ ವಸ್ತುಗಳನ್ನು ತೆಗೆದುಕೊಂಡು ಪಂಡಿತರ ಮನೆಯೆಡೆಗೆ ಬಂದ. ಬಾಗಿಲಲ್ಲಿ ನಿಂತು,

"ಬುದ್ಧಿ, ಒಂದು ಚೂರು ಕೆಂಡ ಕೊಟ್ಟರೆ ಚಿಲುಮೆ ಸೇದಬಹುದಿತ್ತು" ಎಂದ.

ಪಂಡಿತರು ಊಟ ಮಾಡುತ್ತಿದ್ದರು. ಅವರ ಮಡದಿ ನೋಡಿ,

"ಇವನಾರೋ ಕೆಂಡ ಕೇಳುತ್ತಿದ್ದಾನಲ್ಲಾ!?..." ಎಂದಳು.

"ಅರೇ!... ಅವನು ದುಖಿ ಸಮಗಾರನಲ್ಲವಾ... ಒಲೆಯಲ್ಲಿರುವ ಸೌದೆಯ ಒಂದು ತುಂಡು ಕೊಡು..." ಎಂದರು ಪಂಡಿತರು. ಅವಳಿಗೆ ಸಿಡಿಮಿಡಿಯಾಯಿತು.

"ನಿಮಗೆ ಯಾವುದೇ ಮಡಿ ಮೈಲಿಗೆ ಇದ್ದಂತಿಲ್ಲ... ಸಮಗಾರರು, ಅಗಸರು, ಕಟುಕರು ಎಲ್ಲರೂ ಮನೆಯೊಳಗೆ ಬರುವಂತಾಗಿದೆ... ಇದೇನು ಹಿಂದೂ ಮನೇನಾ ಅಥವಾ ಸಾರಾಯಿ ಮನೇನಾ... ನೋಡಿ, ಮೊದಲು ಅವನಿಗೆ ಇಲ್ಲಿಂದ ಹೊರಟು ಹೋಗಲು ಹೇಳಿ... ಇಲ್ಲದಿದ್ದರೆ ಮುಖ ಮೂತಿ ನೋಡದೆ ಚಚ್ಚಿ ಬಿಡ್ತೀನಿ ಅಷ್ಟೇ... ಬೆಂಕಿ ಬೇಕಂತೆ ಬೆಂಕಿ..." ಬುಸುಗುಟ್ಟಿದಳು. ಪರಿಸ್ಥಿತಿ ಕಂಡು ಪಂಡಿತರು ಸಮಾಧಾನದಲ್ಲಿ ತಿಳಿಹೇಳಿದರು.

"ಮನೆ ಒಳಗೆ ಬಂದರೆ ಏನಾಯ್ತು?... ನಿನ್ನ ಯಾವ ವಸ್ತುಗಳನ್ನು ಅವನು ಮುಟ್ಟಿಲ್ಲವಲ್ಲಾ. ಮೈಲಿಗೆಯಾಗಿಲ್ಲ ಬಿಡು. ನೆಲ ಪವಿತ್ರವಾಗಿದೆ. ಸ್ವಲ್ಪ ಕೆಂಡ ಕೊಟ್ಟರಾಯಿತಲ್ಲಾ... ಅವನು ನಮ್ಮದೇ ಕೆಲಸ ಮಾಡುತ್ತಿದ್ದಾನೆ. ಕಟ್ಟಿಗೆ ಒಡೆಯಲು ಬೇರೆಯವರಿಗೆ ಹೇಳಿದ್ದರೆ ಕೂಲಿ ಕೊಡಬೇಕಾಗಿತ್ತು. ಗೊತ್ತೇನು!?..."

"ಮತ್ತೆ ಅವನೇಕೆ ಮನೆಯೊಳಗೆ ಬಂದ?..."

"ಅದು ಅವನ ದುರಾದೃಷ್ಟ, ಏನು ಮಾಡೊಕ್ಕಾಗುತ್ತೆ." ಪಂಡಿತರು ನಿಸ್ಸಹಾಯಕರಾದರು.

"ಆಯ್ತು, ಇದೊಂದು ಸಲ ಕೆಂಡ ಕೊಡ್ತೀನಿ. ಆದ್ರೆ ಮುಂದೆ ಇದೇ ತರಹ ಮನೆಯೊಳಗೆ ಬಂದರೆ ಅವನ ಬಾಯಿ ಸುಟ್ಟು ಬಿಡ್ತೀನಿ ಅಷ್ಟೇ..." ಎಂದಳು. ಅವಳ ಮಾತನ್ನು ಕೇಳಿಸಿಕೊಂಡ ದುಖಿ, 'ಅಮ್ಮನವರು ನಿಜವನ್ನೇ ಹೇಳುತ್ತಿದ್ದಾರಲ್ಲವೇ!... ಪೂಜೆ ಪುನಸ್ಕಾರಗಳಿಂದ ಮಡಿ ಮೈಲಿಗೆ ಆಚರಿಸುವ ಶುದ್ಧರಿಗೆ ಇಡೀ ಊರ ಕುಟುಂಬಗಳು ಸುಮ್ಮನೆ ಸನ್ಮಾನ ಮಾಡುತ್ತವೆಯೇ!... ಇಷ್ಟು ವರ್ಷ ಇದೇ ಊರಿನಲ್ಲಿದ್ದರೂ ತನಗೇಕೆ ಬುದ್ಧಿ ಬರಲಿಲ್ಲ!?...' ದುಖಿ ಪಶ್ಚಾತ್ತಾಪದಲ್ಲಿ ನೊಂದುಕೊಂಡ.

ಪಂಡಿತರ ಮಡದಿ ಇಕ್ಕುಳದಲ್ಲಿ ಕೆಂಡ ಹಿಡಿದುಕೊಂಡು ಹೊರಗೆ ಬಂದಳು. ಕೆಂಡ ನೋಡಿ ದುಖಿಗೆ ಸ್ವರ್ಗದಿಂದ ವರದಾನವೇ ಬಂದಂತಾಯಿತು. ಎರಡು ಕೈಗಳನ್ನು ಜೋಡಿಸಿ ಬರೀ ನೆಲಕ್ಕೆ ಹಣೆ ಒತ್ತಿ,